ಭರ್ತಿಮಾಡುಲು ಅನುಮತಿ ನೀಡಿರುವುದರಿಂದ, ಸದ್ಯದಲ್ಲಿಯೇ ಈ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.ಈಹುದ್ದೆಗಳನ್ನು ಅಬಾಲಿಷ್ ಮಾಡುವ ಪ್ರಸ್ತಾವನೆ ಇಲ್ಲ.

4. ಉತ್ತರ ಕನ್ನಡ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ.

1.35. ಪಿ.ಎಂ.

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಉಪಾಧ್ಯಕ್ಷಣೆಯವರೆ, ಉತ್ತರ ಕರ್ನಾಟಕದ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ ಮಾಡುವ ಕುರಿತು-ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳು ಶೈಕ್ಷಣಿಕವಾಗಿ, ಕೃಷಿ, ಕೈಗಾರಿಕೆ, ನೀರಾವರಿ, ಗ್ರಾಮೀಣ ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿಯಾಗದೇ ಬಹಳ ಹಿಂದುಳಿದಿರುತ್ತದೆ. ಇಲ್ಲಿನ ಅನೇಕ ಅಭಿವೃದ್ಧಿ ಕಾರ್ಯಗಳು ಅರ್ಧವಾಗಿ ಉಳಿದಿದ್ದು ಯೋಜನೆಗಳು ಕಾರ್ಯಗತಗೊಳ್ಳದೆ ಹಾಗೆ ಉಳಿದಿರುತ್ತದೆ. ಅಲ್ಲದೆ ಇಲ್ಲಿನ ಸಾರ್ವಜನಿಕರ ಪ್ರಮುಖ ಬೇಡಕೆಗಳಲ್ಲಿ ಇದೊಂದು ಸಹ ಮುಖ್ಯವಾದ ಬೇಡಿಕೆಯಾಗಿರುತ್ತದೆ. ಆದಕಾರಣ, ಈ ಭಾಗದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚಿಸಿ 1993-94ನೇ ಸಾಲಿನ ಆಯವ್ಯ ಪತ್ರದಲ್ಲಿ ನೂರು ಕೋಟಿ ರೂಪಾಯಿ ಮೀಸಲಿಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಎಂ. ವೀರಪ್ಪ ಮೋಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣೆಯವರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ, ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಶಿವಮೊಗ್ಗ ಇವುಗಳು ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿದೆ. ಯಾವುದೇ ಹೆಚ್ಚಿನ ಪ್ರದೇಶಾಭಿವೃದ್ಧಿ ಮಂಡಳಿಗಳು ರಚನೆಯ ಬಗ್ಗೆ ವಿಚಾರಿಸುವುದಕ್ಕಿಂತ ಮೊದಲು ಈಗಾಗಲೇ ಸ್ಥಾಪಿತವಾಗಿರುವ ಪ್ರದೇಶಾಭಿವೃದ್ಧಿ ಮಂಡಳಿಗಳ ಕಾರ್ಯ ವೈಖರಿಯನ್ನು ವೀಕ್ಷಿಸುವುದು ಸೂಕ್ತ.

ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿಗ್ರಾಮದಲ್ಲಿ ವಿವಿಯನ್ ಡಿಸಿಲ್ವ ಎನ್ನುವವರ ಕೊಲೆ.

ಶ್ರೀ ಸಿ.ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷಣೆಯವರೆ, ದಿನಾಂಕ 29-12-1992ರ ರಾತ್ರಿ 10-30 ಗಂಟೆಗೆ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿ ಗ್ರಾಮದಲ್ಲಿ ಕೆಲವು ಯುವಕರು ವಿವಿಯನ್ ಡಿಸಿಲ್ವ ಎನ್ನುವ ಯುವಕನನ್ನು ತಿವಿದು ಕೊಂದು ಅದೇ ವ್ಯಕ್ತಿಯ ಸಂಬಂಧಿಗಳನ್ನು ಮರಣಾಂತಿಕವಾಗಿ ತಿವಿದಿರುತ್ತಾರೆ. ಈ ಘಟನೆ ನಡೆದ ಹತ್ತೇ ನಿಮಿಷಗಳಲ್ಲಿ ಸಾರ್ವಜನಿಕರು ದೂರವಾಣಿ ಮೂಲಕ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಆ ವೇಳೆಯಲ್ಲಿ ಉಪಸ್ಥಿತರಿದ್ದ ಹೆಡ್ ಕಾನ್‌ಸ್ಟಬಲ್ ಮತ್ತು ಠಾಣೆಯ ರೈಟರ್‌ರವರಿಗೆ ಆರೋಪಿಗಳ ಹೆಸರು, ಬಳಸಿದ ವಾಹನಗಳ ವಿವರ ನೀಡಿದ್ದಾಗ್ಯೂ ಪೋಲೀಸರು ಒಂದೂವರೆ ಕಿಲೋ ಮೀಟರ್ ದೂರದ ಈ ಘಟನಾ ಸ್ಥಳಕ್ಕೆ ಮೂರು ಗಂಟೆ ತಡವಾಗಿ ಬಂದು ಆರೋಪಿಗಳು ತಪ್ಪಿಸಿಕೊಳ್ಳುವಲ್ಲಿ ಸಹಕರಿಸಿರುತ್ತಾರೆ.

ಮೇಲೆ ತಿಳಿಸಿದಂತೆ ಹೊಟ್ಟೆಯ ಕೊಯಿತದ ಮರಣಾಂತಿಕ ಗಾಯಗಳಿಂದ ಮಣಿಪಾಲದ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಸೇರಲು ಹೊರಟ ಮೃತರ ಸಂಬಂಧಿಯನ್ನು ಸ್ಥಳ ಪರಿಶೀಲಿಸಲು ಬಲಾತ್ಕಾರವಾಗಿ ಕರೆ ತರುವ ಅಮಾನವೀಯ ವರ್ತನೆಯನ್ನು ಪೋಲೀಸರು ಪ್ರದರ್ಶಿಸಿದ್ದು ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿದೆ.

ನನ್ನ ಕ್ಷೇತ್ರದಲ್ಲಿ ಇತ್ತೀಚೆಗಿನ ಈ ಘಟನೆ ಅಲ್ಲದೆ,ಈ ಹಿಂದೆ ಇದೇ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಒಂದು ಸಂಶಯಾಸ್ಪದ ಕೊಲೆ, ಬ್ಯಾಂಕ್ ದರೋಡೆ, ಅಲ್ಲದೆ ಪ್ರಮುಖ ಸರ್ಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಯಲ್ಲಿ ನಡೆದ ಕಳ್ಳತನ ಕುರಿತಂತೆ ಎಲ್ಲಾ ಪ್ರಕರಣ ಆರೋಪಿಗಳ ಖಚಿತ ಸುಳಿವು ಸಾರ್ವಜನಿಕರು ನೀಡಿದ್ದಾಗ್ಯೂ ಪೋಲೀಸರು ತಮ್ಮ ದಿವ್ಯ ನಿರ್ಲಕ್ಷ್ಯದಿಂದ ಆರೋಪಿಗಳನ್ನು ಹಿಡಿಯಲು ನಿರಾಸಕ್ತರಾಗಿದ್ದು ಪದೇ ಪದೇ ಕರ್ತವ್ಯ ಲೋಪ ಎಸಗುತ್ತಿದ್ದಾರೆ.

ಈ ಘಟನೆ ಕುರಿತಂತೆ ನಿರ್ಲಕ್ಷ ತೋರಿ ಸಾರ್ವಜನಿಕ ಮನದಲ್ಲಿ ಪೋಲೀಸರ ವಿಶ್ವಾಸಾರ್ಹತೆ ಕುರಿತಂತೆ ಸಂಶಯ ಬಲಗೊಳ್ಳಲು ಕಾರಣರಾದ ಪೋಲೀಸರನ್ನು ಅಮಾನತ್ತುಗೊಳಿಸಿ ಮತ್ತೆ ಮೇಲೆ ತಿಳಿಸಿದ ಎಲ್ಲಾ ಪ್ರಕರಣಗಳನ್ನು ಸಿಓಡಿ. ತನಿಖೆಗೆ ಒಪ್ಪಿಸಬೇಕೆನ್ನುವ ಸಾರ್ವಜನಿಕರ ಒಟ್ಟಾರೆ ಅಭಿಪ್ರಾಯವನ್ನು ಕಳಕಳಿಯಿಂದ ಈ ಸದನದ ಮೂಲಕ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

---- ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣೆಯವರೆ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಿನಾಂಕ : 29-12-92ರ ರಾತ್ರಿ 10 ಘಂಟೆ 30 ನಿಮಿಷಗಳ ಸುಮಾರಿಗೆ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ವಿವಿಯನ್ ಡಿಸಿಲ್ವ ಎಂಬ ವ್ಯಕ್ತಿಯನ್ನು ಕೆಲವು ವ್ಯಕ್ತಿಗಳು ತಿವಿದುಕೊಂದು ಅದೇ ವ್ಯಕ್ತಿ ಸಂಬಂಧಿಗಳನ್ನು ತಿವಿದು ತೀವ್ರವಾಗಿ ಗಾಯಗೊಳಿಸಿರುವುದು ನಿಜ. ಈ ಬಗ್ಗೆ ಗಾಯಗೊಡ ಶ್ರೀ ಜಾರ್ಜ ಡಯಾಜ ಇವರು ದಿನಾಂಕ : 29-12-92ರಂದು ರಾತ್ರಿ 11 ಘಂಟೆಗೆ ಬ್ರಹ್ಮಾವರ ಪೋಲೀಸ್ ಠಾಣೆಗೆ ನೀಡಿದ ದೂರಿನ ಆಧಾರೇದ ಮೇಲೆ ಬ್ರಹ್ಮಾವರ ಪೋಲೀಸ್ ಠಾಣೆ ಅಪರಾಧ ಸಂಖ್ಯೆ 80-92 ರಲ್ಲಿ ಕೊಲೆ ಮತ್ತು ಕೊಲೆಗೆ ಪ್ರಯತ್ನದ ಪ್ರಕರಣ ಒಂದನ್ನು ದಾಖಲು ಮಾಡಿಕೊಂಡು ತನಿಖೆ ಮಾಡಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಎಸ್.ಪಿ. ಮತ್ತು ಉಡುಪಿಯ ಡಿ.ವೈ.ಎಸ್.ಪಿ. ಗಳ ಮಾರ್ಗದರ್ಶನದಲ್ಲಿ ತನಿಖೆಯ ನಡೆಯುತ್ತಿದೆ. 8 ಜನ ಅಪರಾಧಿಗಳನ್ನು ಗುರುತಿಸಲಾಗಿದ್ದುಅವರನ್ನು ಪತ್ತೆ ಹಚ್ಚಿ ಬಂಧಿಸಲು ತೀವ್ರ ಕ್ರಮ ಪ್ರಗತಿಯಲ್ಲಿದೆ. ಅಪರಾಧಿಗಳನ್ನು ಬೇಗನೆ ಬಂಧಿಸುವ ನಿರೀಕ್ಷೆ ಇದೆ.

ಈ ಕೃತ್ಯ ನಡೆದ 10ನಿಮಿಷಗಳಲ್ಲಿ ಅಪರಾಧಿಗಳ ಹೆಸರುಗಳನ್ನು ಸಾರ್ವಜನಿಕರು ಪೋಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಮತ್ತು ಠಾಣಾ ಬರಹಗಾರರಿಗೆ ತಿಳಿಸದರೂ ಸಹಿತ ಅವರು ಏನೂ ಕ್ರಮಕೊಳ್ಳದೆ ಅಪರಾಧಿಗಳು ತಪ್ಪಿಸಿಕೊಳ್ಳಲು ಸಹಾಯ ಮಾಡಿದರು ಎಂಬುದು ನಿಜವಲ್ಲ. ಠಾಣಾಬರಹಗಾರ ಪೋಲೀಸ್ ಕಾನ್‌ಸ್ಟೇಬಲ್ ವಾಸನ್ ಇವರು 28-12-92ಮತ್ತು 20-12-92ರಂದು ರಜೆಯಮೇಲಿದ್ದರು ಮತ್ತು ಊರಿನಲ್ಲಿರಲಿಲ್ಲ, ಪೋಲೀಸರು ಸ್ಥಳಕ್ಕೆ 3 ಘಂಟೆಗಳ ಕಾಲ ತಡವಾಗಿ ಬಂದರೆಂಬುದು ನಿಜವಲ್ಲ. ಪೋಲೀಸರು ತೀವ್ರ ಗಾಯಗೊಂಡ ಮೃತ ವ್ಯಕ್ತಿಯ

ಸಂಬಂಧಿಕರನ್ನು ಕೃತ್ಯ ನಡೆದ ಸ್ಥಳವನ್ನು ತೋರಿಸಲು ಅಮಾನವೀಯ ರೀತಿಯಲ್ಲಿ ಮಣಿಪಾಲ ಆಸ್ಪತ್ರೆಯಿಂದ ಕರೆದುಕೊಂಡು ಹೋದರು ಎಂಬುದು ಸರಿಯಲ್ಲ.

ಪೋಲೀಸರು ಅಪರಾಧಿಗಳಿಗೆ ಸಂಬಂಧಪಟ್ಟ ಒಂದು ಸ್ಕೂಟರ್ ಮತ್ತು ಒಂದು ಮೋಟರ್ ಸೈಕಲ್ಲನ್ನು ಈಗಾಗಲೇ ವಶಪಡಿಸಿಕೊಂಡಿದ್ದಾರೆ. ಈ ಪ್ರಕರಣದ ತನಿಖೆಯನ್ನು ಹೆಚ್ಚಿನ ಮುತವರ್ಜಿ ವಹಿಸಿ ನಿರ್ವಹಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ಆದೇಶಿಸಿದೆ.

ಈ ಪ್ರಕರಣ ತನಿಖೆಯಲ್ಲಿ ಯಾವುದೇ ಲೋಪದೋಷವಾಗಿದ್ದು ಅದರ ಬಗ್ಗೆ ವಿಚಾರಣೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ಕೈಗೊಳ್ಳಲು ಅವರಿಗೆ ಸೂಚಿಸಿದೆ.

ಮಾನ್ಯ ಸದಸ್ಯರು ಸೂಚಿಸಿದ ಒಂದು ಸಂಶಯಾಸ್ಪದ ಕೊಲೆ, ಬ್ಯಾಂಕ್, ದರೋಡೆ, ಸಕ್ಕರೆ ಕಾರಖಾನೆಗಳಲ್ಲಿ ನಡೆದ ಕಳ್ಳತನದ ಪ್ರಕರಣಗಳ ಬಗ್ಗೆ ತನಿಖೆಯಲ್ಲಾಗಲೀ ಅಥವಾ ಇತರ ಪೋಲೀಸ್ ಕರ್ತವ್ಯನಿರ್ವಹಣೆಯಲ್ಲಾಗಲೀ ಯಾವದೇ ನ್ಯೂನತೆಗಳು ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿವೆಯೇ ಎಂಬುದನ್ನು ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ 15 ದಿನಗಳಲ್ಲಿ ವರದಿ ಮಾಡಲು ಪಶ್ಚಿಮ ವಲಯ ಡಿ.ಐ.ಜಿ.ಯವರಿಗೆ ಆದೇಶಿಸಿದೆ.

ಮಂಡ್ಯ ನಗರದ ಮಧ್ಯೆ ಹಾದುಹೋಗುವ ಬೆಂಗಳೂರು-ಮೈಸೂರು ರಸ್ತೆಯ ಮಧ್ಯೆ ಇರುವ ಮೀಡಿಯಮ್ ಕುರಿತು

ಶ್ರೀ ಎಂ. ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ಮಂಡ್ಯ ನಗರದ ಮಧ್ಯೆ ಹಾದು ಹೋಗುವ ಬೆಂಗಳೂರು-ಮೈಸೂರು ರಸ್ತೆಯನ್ನು ಎರಡು ಭಾಗವಾಗಿ ಮಾಡಿ ಮೀಡಿಯಮ್ ಅನ್ನು ಹಾಕಲಾಗಿದ್ದು, ಈ ಮೀಡಿಯಮ್ ಹಾಕಿದ ನಂತರ ಜೋಡಿ ರಸ್ತೆಗಳು ಎರಡೂ ಸಹ ತುಂಬಾ ಹಾಳಾಗಿದ್ದು, ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿರುವುದಿಲ್ಲ. ಈ ರಸ್ತೆಗಳಲ್ಲಿ ಅಲ್ಲಲ್ಲಿ ಹಳ್ಳಗಳಾಗಿದ್ದು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದೆ, ತುಂಬಾ ತೊಂದರೆಯಾಗುತ್ತಿದೆ. ಹಾಗೂ ಜೋಡಿರಸ್ತೆಗಳಲ್ಲಿ ಬೀದಿ ದೀಪಗಳಿಲ್ಲದೆ, ವಾಹನಗಳು ಜೋಡಿ ರಸ್ತೆ ಮಧ್ಯೆ ಇರುವ ಮೀಡಿಯನ್‌ಗೆ ಡಿಕ್ಕಿ ಹೊಡೆಯುತ್ತಾ ಇದ್ದು, ದಿನಕ್ಕೊಂದು ಅಪಘಾತವು (ಆಕ್ಸಿಡೆಂಟ್) ಸರ್ವೆ ಸಾಮಾನ್ಯವಾಗಿದೆ. ಪ್ರಯಾಣಿಕರು ತುಂಬಾ ಭಯಗ್ರಸ್ಥರಾಗಿದ್ದಾರೆ. ಈ ಜೋಡಿರಸ್ತೆ ನಿರ್ಮಾಣ ಕಾಮಗಾರಿ ಪೂರ್ಣವಾಗಿರುವುದಿಲ್ಲ. ಈ ಜೋಡಿ ದುರಸ್ತಿಗಳನ್ನು ದುರಸ್ತಿ ಮಾಡುವ ಕಾರ್ಯವನ್ನು, ಹಾಗೂ ಜೋಡಿ ರಸ್ತೆಯಲ್ಲಿ ಆಗುವ ಅಪಘಾತವನ್ನು ತಪ್ಪಿಸಲು ಪರಿಹಾರೋಪಾಯಗಳನ್ನು ಕೈಗೊಳ್ಳಬೇಕೆಂದು ಆಗ್ರಹ ಪೂರ್ವಕವಾಗಿ ಒತ್ತಾಯಪಡಿಸುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಉಪಾಧ್ಯಕ್ಷಣೆಯವರೇ,

ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯು ಮಂಡ್ಯ ನಗರ ಪ್ರದೇಶ ವ್ಯಾಪ್ತಿಯಲ್ಲಿ ಸುಮಾರು 4 ಕಿ.ಮೀ.ನಷ್ಟು ಹಾದು ಹೋಗುತ್ತದೆ. ಈ ಭಾಗವು, ಅತ್ಯಂತ ಜನನಿಬಿಡ ಹಾಗೂ ವಾಹನ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ,